<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಾಂತಾರಾಮ ಬುಡ್ನ ಸಿದ್ಧಿ (ನಾಮ ನಿರ್ದೇಶಿತರು) ರವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ.128ಕ್ಕೆ ಸರ್ಕಾರದ ಹೇಳಿಕೆ</u>

-: ಸೂಚನೆ :-

ರಾಜ್ಯದಲ್ಲಿನ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ರೈತರು ಸಾಗುವಳಿ ಮಾಡುತ್ತಿರುವ ಜಮೀನಿನ ಜಿ.ಪಿ.ಎಸ್ (GPS) ಅನ್ನು ಪರಿಪೂರ್ಣ ಮಾಡಿರುವುದಿಲ್ಲ. ಅದನ್ನು ಸರಿಪಡಿಸಬೇಕು ಮತ್ತು ಹಿಂದಿನಿಂದಲೂ ರೈತರು ಸಾಗುವಳಿ ಮಾಡುತ್ತಿರುವ ಪೂರ್ಣ ಜಮೀನನ್ನು ಜಿ.ಪಿ.ಎಸ್ (GPS) ಮಾಡಬೇಕು ಹಾಗೂ ರೈತರಿಗೆ ಧೈರ್ಯ ತುಂಬುವ ಕಾರ್ಯ ಆಗಬೇಕು ಎಂದು ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

-: ಹೇಳಿಕೆ :-

ಕರ್ನಾಟಕ ರಾಜ್ಯದಲ್ಲಿ ರೈತರ ಜಮೀನಿಗೆ ಸಂಬಂಧಿಸಿದಂತೆ, ಸರ್ವೆ ನಂಬರ್‌ವಾರು ಭೂದಾಖಲೆಗಳನ್ನು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯ ಅಭಿಲೇಖಾಲಯದಲ್ಲಿ ಹಾಗೂ ತಹಶೀಲ್ದಾರ್ ಕಛೇರಿಯ ಅಭಿಲೇಖಾಲಯದಲ್ಲಿ ನಿರ್ವಹಿಸಲಾಗುತ್ತಿದೆ. ರೈತರು ಮಾಡಿಕೊಳ್ಳುವ ಯಾವುದೇ ವಹಿವಾಟಿಗನುಗುಣವಾಗಿ ನವೀಕರಿಸಲಾಗುತ್ತಿದೆ. ಇದುವರೆವಿಗೂ ರೈತರ ಜಮೀನನ್ನು ಚೈನ್ ಮತ್ತು ಕ್ರಾಸ್ ಸ್ಟಾಫ್ ಮತ್ತು ಪ್ಲೇನ್ ಟೇಬಲ್ ಉಪಕರಣಗಳಿಂದ ಅಳತೆ ಮಾಡುವ ಪದ್ಧತಿಯು ಜಾರಿಯಲ್ಲಿತ್ತು. ನಂತರದಲ್ಲಿ ಕೆಲವು ಪ್ರಕರಣಗಳ ಬಾಬ್ತು ETS (ಎಲೆಕ್ಟ್ರಾನಿಕ್ ಟೋಟಲ್ ಸ್ಟೇಷನ್) ಮುಖಾಂತರ ಅಳತೆ ಮಾಡುವ ಪದ್ಧತಿ ಅಳವಡಿಸಿಕೊಳ್ಳಲಾಗಿತ್ತು. ಕಳೆದ ಎರಡು ವರ್ಷಗಳಿಂದ ರೋವರ್ಸ್ ಉಪಕರಣಗಳ ಮುಖಾಂತರ ಅಳತೆ ಮಾಡುವ ಪದ್ಧತಿಯನ್ನು ಕೆಲವು ತಾಲ್ಲೂಕುಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದುವರೆವಿಗೂ ಇಲಾಖೆಯಲ್ಲಿ 590 ರೋವರ್ಸ್‌ಗಳು ಲಭ್ಯವಿದ್ದು, ಮುಂದಿನ ವರ್ಷಗಳಲ್ಲಿ ಹಂತ ಹಂತವಾಗಿ ಒಟ್ಟು 5,000 ರೋವರ್ಸ್ ಗಳನ್ನು ಖರೀದಿಸುವ ಗುರಿ ಹೊಂದಲಾಗಿದೆ. ಈ ರೀತಿಯಾಗಿ ಕಳೆದೆರಡು ವರ್ಷಗಳಿಂದ ಜಿ.ಪಿ.ಎಸ್ ಆಧಾರಿತ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅಳತೆ ಕಾರ್ಯ ನಿರ್ವಹಿಸಲಾಗುತ್ತಿದೆ ಮತ್ತು ಅಂತೆಯೇ ಭೂದಾಖಲೆಗಳನ್ನು ತಯಾರಿಸಲಾಗುತ್ತಿದೆ.

ಇದಲ್ಲದೇ, ಅತ್ಯಂತ ಸೂಕ್ಷ್ಮ ಪ್ರದೇಶವಾದಂತಹ ಅರಣ್ಯ ಜಮೀನಿಗೆ ಹೊಂದಿಕೊಂಡಿರುವ ಸರ್ಕಾರಿ ಹಾಗೂ ರೈತರ ಹಿಡುವಳಿ ಜಮೀನಿನ ಅಳತೆ ಕಾರ್ಯವನ್ನು ಆದ್ಯತೆಯ ಮೇರೆಗೆ ಉನ್ನತ ತಂತ್ರಜ್ಞಾನವನ್ನು ಅಳವಡಿಸಿಕೊಂಡೇ ನಿರ್ವಹಿಸಲು ಕ್ರಮ ಜರುಗಿಸಲಾಗಿದೆ. ಅತಿ ದೊಡ್ಡ ವಿಸ್ತೀರ್ಣದ ಅರಣ್ಯ ಪ್ರದೇಶಗಳನ್ನು ಡ್ರೋನ್ ತಂತ್ರಜ್ಞಾನವನ್ನು ಆಧರಿಸಿ ಸರ್ವೆ ಕೆಲಸ ನಿರ್ವಹಿಸಲಾಗುತ್ತಿದೆ.

ಹೀಗೆ ಆಧುನಿಕ ತಂತ್ರಜ್ಞಾನಗಳಾದ ಜಿ.ಪಿ.ಎಸ್ (Global Positioning System) ಆಧಾರಿತ ಡಿಜಿಟಲ್ ಸರ್ವೆ ಸಾಧನಗಳಾದ ರೋವರ್‌ಗಳು ಹಾಗೂ ಡ್ರೋನ್ ತಂತ್ರಜ್ಞಾನಗಳ ಬಳಕೆಯ ಮೂಲಕ ಭೂಮಾಪನ ಕಾರ್ಯವನ್ನು ಹಂತ ಹಂತವಾಗಿ ಸುಗಮಗೊಳಿಸಲಾಗುತ್ತಿದೆ.

ಡಿಜಿಟಲ್ ತಂತ್ರಜ್ಞಾನದಿಂದ ಅಳತೆ ಮಾಡಿದಂತೆಯೇ, ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು, ಕಡತಗಳ ಚಲನ-ವಲನ, ಹಕ್ಕು ದಾಖಲೆಗಳ ನಿರ್ಮಾಣದ ಕೆಲಸಗಳನ್ನು ಸಹ ಮಾಡಲಾಗುತ್ತಿದೆ. ಒಟ್ಟಾರೆ ಭೂದಾಖಲೆಗಳ ಜಮೀನಿನ ಅಳತೆಯಲ್ಲಿ ನಿಖರತೆ, ಲೋಪದೋಷರಹಿತ ದಾಖಲೆ ನಿರ್ಮಾಣ ಹಾಗೂ ದಾಖಲೆಗಳ ಶೇಖರಣೆ ಕಾರ್ಯವನ್ನು ತಂತ್ರಜ್ಞಾನ ಅಳವಡಿಸಿಕೊಂಡು ನಿರ್ವಹಿಸುವುದರಿಂದ ಸಾರ್ವಜನಿಕರಿಗೆ ಸಮರ್ಪಕವಾದ ಸೇವೆಯನ್ನು ನೀಡಲಾಗುತ್ತಿದೆ.

<u>ಸಂಖ್ಯೆ: ಕಂಇ 54 ಎಸ್ ಎಸ್ ಸಿ 2026</u>

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು